# ಗುಡ್ ನೈಟ್ Good Night Lyrics in Kannada

ಜಗದೊದ್ದಾರನ ಆಡಿಸಿದಳು ಯಶೋಧ
ಜಗದೊದ್ದಾರನ ಆಡಿಸಿದಳು ಯಶೋಧ
ಜಗದೊದ್ದಾರನ ಬದುಕುವ ದಿನಗಳೆ ಇಲ್ಲಿ ನಾಲ್ಕು
ಅದರಲ್ಲಿ ದ್ವೇಷವು ಯಾತಕೆ ಬೇಕು
ಹೊತ್ತುಂದ್ ಊಟ ಕಣ್ತುಂಬ ನಿದ್ದೆ
ನಮ್ಮೋರ್ ನಾಲ್ಕ್ ಜನ ಇದ್ರೆ ಸಾಕು

ಕ್ರೋಧವು ತೂತು ಬಿದ್ದಿರುವ ಮಡಿಕೆ
ಶಾಂತಿಯು ಮನಸಲಿ
ಚಿಗುರುವ ಗರಿಕೆ
ಒಂದ್ ತುತ್ತು ನಿಂಗೆ ಒಂದ್ ತುತ್ತು ಮನೆಗೆ ಮಿಕ್ಕಿದ್ ಹಂಚು ಹಸಿದವರಿಗೆ
ಇದು ಮಾತಿಗೆ ಹೇಳೊದಲ್ಲ ಒಬ್ರು ಮಾಡಿದರು
ಕರುನಾಡ ಪ್ರೀತಿ ಸಿಕ್ಕಿ ಬೆಳೆದ ಸಾಧಕರು
ಅವರೇ ಕಷ್ಟಕ್ಕೆ ಆದ ಗೆಳೆಯ
Bharatlyrics.com
ನಗುಮುಖದೊಡೆಯ ಗಂಧದಗುಡಿಯ ಮಾಲೀಕನು

ಜಗದೊದ್ದಾರನ ಮಗನೆಂದು
ತಿಳಿಯುತ
ಜಗದೊದ್ದಾರನ ಮಗನೆಂದು
ತಿಳಿಯುತ
ಗಂಧದಗುಡಿಯ ಮಾಣಿಕ್ಯನ
ಆಡಿಸಿದಳ್ ಯಶೋಧ

ದೀಪವ ಬೆಳಗಿದೆ ಕಣ್ಣನ್ನು ಕೊಟ್ಟು
ಗಾಳಿಯ ಕೊಡಿಸಿದೆ
ಸಸಿಯನ್ನು ನೆಟ್ಟು
ಎತ್ತರ ಬೆಳೆದರೂ ತಗ್ಗಿ ನಡೆದೆ
ಕನ್ನಡ ತಾಯಿಗೆ ನೀ ಸಂಪತ್ತು
ನಾಲ್ಕ್ ಜನ ಹೋದರೆ
ನೂರ್ ಜನ ಪಡೆವೆ
ರಾಜಕುಮಾರನಿಗೆ ಸೈನ್ಯವ ಬರವೇ
ಜನಗಳ ಒಪ್ಪುಗೆ ದೇವರ ಮೆಚ್ಚುಗೆ
ಎರಡು ನಿನ್ನದೇ ಪ್ರೀತಿಯ ಅಪ್ಪು

ಕಂಡೋರ ಮೆಚ್ಚಿಸಲು ಹಣ ಬೇಕು
ನಿನ್ನ ನಂಬಿದವರ ಮೆಚ್ಚಿಸಲು
ಗುಣ ಸಾಕು
ಯಾರ್ ಏನಂದರು ಯೋಚನೆ ಮಾಡದೆ ನಗುವಲೇ ಉತ್ತರ ಕೊಡಬೇಕು
ನುಡಿದರೆ ಮುತ್ತಂತಿರಬೇಕು
ನೀ ನಡೆದರೆ ದಾರಿಯ ಬಿಡಬೇಕು
ಪ್ರತಿ ಊರಿನ ರಾಜ್ಯದ ರಾಷ್ಟ್ರದ ರಾಜನು ಇದ್ದರೆ ನಿನ್ನಂಗಿರಬೇಕು

ಜಗದೊದ್ಧಾರನ ಆಡಿಸಿದಳ್ ಯಶೋಧ ಜಗದೊದ್ಧಾರನ ಜಗದೊದ್ಧಾರನ

*More Lyrics from All Ok*

BHARAT lyrics